ಇ) 30,50,000–00ರೂ.ಗಳ ಪರಿಹಾರವನ್ನು ಪಾವತಿ ಮಾಡಲಾಗಿದೆ.

ಈ) –ಇಲ್ಲ–

ಪ್ರತಿ ವಿಧಾನ ಸಭಾ ಸದಸ್ಯರ ಕ್ಷೇತ್ರದಲ್ಲಿ ರಸ್ತೆ ಅಭಿವೃದ್ಧಿ ಕುರಿತು

396. ಶ್ರೀ ಜಿ.ಎಸ್. ಆಚಾರ್ (ಬೈಂದೂರ್):– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದಿನ ವಿಧಾನಸಭಾ ಅಧಿವೇಶನದಲ್ಲಿ ತಿಳಿಸಲಾದಂತೆ ಪ್ರತಿ ವಿಧಾನಸಭಾ ಸದಸ್ಯರ ಕ್ಷೇತ್ರದಲ್ಲಿ (1) ಲೋಕೋಪಯೋಗಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು (2) ಇತರ ಮುಖ್ಯ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಿ, ಅಭಿವೃದ್ಧಿಪಡಿಸಲು ರೂಪಿಸಿದ ಯೋಜನೆ ಯಾವ ಹಂತದಲ್ಲಿದೆ?

ಆ) ದಕ್ಷಿಣ ಕನ್ನಡ ಜಿಲ್ಲೆಯ ಈ ಯೋಜನೆಯನ್ವಯ ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ರಸ್ತೆಗಳ ಅಭಿವೃದ್ಧಿ ಪಡಿಸಲಾಗುತ್ತಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):–

ಅ) (1) ಪ್ರತಿ ವಿಧಾನ ಸಭಾ ಸದಸ್ಯರ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನು 18.00 ಲಕ್ಷರೂ.ಗಳ ಅಂದಾಜಿನಲ್ಲಿ ಅಭಿವೃದ್ಧಿಪಡಿಸಲು ಸರ್ಕಾರದಿಂದ ಸೂಚನೆಗಳನ್ನು 6.10.90ರಂದು ನೀಡಲಾಗಿದ್ದು, ಕಾಮಗಾರಿಗಳ ಕಾರ್ಯಕ್ರಮಗಳನ್ನು ಸಂಬಂಧಪಟ್ಟ ಮುಖ್ಯ ಇಂಜಿನಿಯರ್‌ರವರುಗಳು ಅನುಮೋದಿಸಿದ್ದು ಶೀಘ್ರದಲ್ಲಿ ಕಾಮಗಾರಿಗಳನ್ನು ಆರಂಭ ಮಾಡಲಾಗುವುದು. ಹೆಚ್ಚುವರಿ ಅನುದಾನವನ್ನು ಕೊಡುವ ವಿಷಯವು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ.

(2) ಒಟ್ಟಿನಲ್ಲಿ 6000 ಕಿ.ಮೀ. ಹಳ್ಳಿ ದರ್ಜೆ ಮತ್ತು ಇತರ ಜಿಲ್ಲಾರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ತೀರ್ಮಾನಿಸಲಾಗಿದೆ. ಹೆಚ್ಚುವರಿ ಅನುದಾನ ನೀಡುವುದಕ್ಕೆ ಹಾಗೂ ಸಹಮತಿಗಾಗಿ ಪ್ರಸ್ತಾಪವು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ.

ಆ) (1) ದಕ್ಷಿಣ ಕನ್ನಡ ಜಿಲ್ಲೆಯ 15 ವಿಧಾನಸಭಾ ಕ್ಷೇತ್ರಗಳಲ್ಲಿ ಈ ಯೋಜನೆಯ ಅನ್ವಯ ವಿಧಾನಸಭಾ ಸದಸ್ಯರು ರಸ್ತೆಯ ಆಯ್ದ ಭಾಗಗಳ ಅಭಿವೃದ್ಧಿಗೆ ಸೂಚಿಸಿರುವ ರಸ್ತೆಗಳ ಪೈಕಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಹೆಸರುಗಳನ್ನು ಪಟ್ಟಿ ಅನುಬಂಧ–1ರಲ್ಲಿ ಕೊಡಲಾಗಿದೆ.

(2) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂಬ ವಿಷಯವು ಪರಿಶೀಲನೆಯಲ್ಲಿದೆ.

ಅನುಬಂಧ–1

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 396ರ (ಅ) ಪ್ರಶ್ನೆಗೆ ಉತ್ತರಗಳು

ಕ್ರಮ ಸಂಖ್ಯೆ	ವಿಧಾನ ಸಭಾ ಕ್ಷೇತ್ರ	ವಿಧಾನ ಸಭಾ ಸದಸ್ಯರು ರಸ್ತೆಯ ಆಯ್ದ ಭಾಗಗಳ ಅಭಿವೃದ್ಧಿಗೆ ಸೂಚಿಸಿರುವ ಪೈಕಿ ಲೋಕೋಪಯೋಗಿ ರಸ್ತೆಗಳು
1	2	3
1.	ಮಂಗಳೂರು	ಮಂಗಳೂರು–ಬೈಂದೂರು ರಸ್ತೆ ಹೊಸಪೇಟೆ–ಮಂಗಳೂರು ಬೆಂಗಳೂರು–ಮಂಗಳೂರು ಮಂಗಳೂರು–ಚರ್ವತ್ತೂರು

1	2	3
2.	ಉಳ್ಳಾಲ	ಮಂಗಳೂರು–ಚರ್ಚತ್ತೂರು
		ಮಾಣಿ–ಉಳ್ಳಾಲ
3.	ಸೂರತ್ಕಲ್	(ಜಿಲ್ಲಾ ಪರಿಷತ್ತಿನ ರಸ್ತೆಗಳನ್ನು ಮಾತ್ರ ಸೂಚಿಸಿದ್ದಾರೆ)
4.	ಮುಲ್ಕಿ–ಮೂಡಬಿದ್ರೆ	ಹಳೆಮಂಗಳೂರು–ಬೈಂದೂರು
		ಮುಲ್ಕಿ–ಕಡಪ
		ಮಂಗಳೂರು–ಕಟೀಲು–ಬೆಳ್ಳಣಿ
5.	ಬಂಟ್ವಾಳ	ಮೂಡಬಿದ್ರೆ–ಬಂಟ್ವಾಳ
6.	ವಿಟ್ಲ	ವಿಟ್ಲ–ಸಾಲೆತ್ತೂರು
		ಕಡೂರು–ಬಂಟ್ವಾಳ
		ಬಂಟ್ವಾಳ–ಮಾಳಲಿ–ಗುರುಪುರ
7.	ಪುತ್ತೂರು	ಇಚ್ಲಾಂಪಾಡಿ ರಸ್ತೆ
8.	ಸುಳ್ಯ	(ಜಿಲ್ಲಾ ಪರಿಷತ್ತಿನ ರಸ್ತೆಗಳನ್ನು ಮಾತ್ರ ಸೂಚಿಸಿದ್ದಾರೆ)
9.	ಕಾಪು	(ಜಿಲ್ಲಾ ಪರಿಷತ್ತಿನ ರಸ್ತೆಗಳನ್ನು ಮಾತ್ರ ಸೂಚಿಸಿದ್ದಾರೆ)
10.	ಉಡುಪಿ	ಆಗುಂಬೆ–ಮಲ್ಪೆ
		ಸುಬ್ರಹ್ಮಣ್ಯ–ಧರ್ಮಸ್ಥಳ–ಉಡುಪಿ
		ಹಳೇಮಂಗಳೂರು–ಬೈಂದೂರು
11.	ಬಹ್ಮಾವರ	ಕಲ್ಯಾಣಪುರ–ಕುಕ್ಕೆಹಳ್ಳಿ–ಪೆರ್ಡೂರು
		ಹಳೇಮಂಗಳೂರು–ಬೈಂದೂರು ಕರಾವಳಿ ರಸ್ತೆ
		ಸೀತಾನದಿ–ಬ್ರಹ್ಮಾವರ ರಸ್ತೆ
		ಬಹ್ಮಾವರ – ಜನ್ನಾಡಿ ಕೋಟಗೋಳಿ ಅಂಗಡಿ ರಸ್ತೆ
12.	ಕಾರ್ಕಳ	ಸುಬ್ರಹ್ಮಣ್ಯ–ಧರ್ಮಸ್ಥಳ–ಬೆಳ್ತಂಗಡಿ
		ಆಗುಂಬೆ–ಮಲ್ಪೆ
		ಸೋಮೇಶ್ವರ–ಕೋಟೇಶ್ವರ
		ಹೆಬ್ರಿ–ಬೆಳ್ಮೆ
		ಸೀತಾನದಿ–ಬ್ರಹ್ಮಾವರ
		ಆಜೇಕಾರ–ಮಿಯಾರು–ಉಪ್ಪಿನಂಗಡಿ
13.	ಬೆಳ್ತಂಗಡಿ	ಸುಬ್ರಹ್ಮಣ್ಯ–ಧರ್ಮಸ್ಥಳ–ಉಡುಪಿ
14.	ಕುಂದಾಪುರ	ಹಿಲಿಯಾಣ–ಶಿರೂರು
		ಕೋಟಗೋಳಿ ಅಂಗಡಿ ರಸ್ತೆ
15.	ಬೈಂದೂರು	ಜಿಲ್ಲಾ ಪರಿಷತ್ತಿನ ರಸ್ತೆಗಳನ್ನು ಮಾತ್ರ ಸೂಚಿಸಿದ್ದಾರೆ.

ಬೈಂದೂರಿನಲ್ಲಿ ಕಾಲೇಜ್ ಕಟ್ಟಡ ನಿರ್ಮಿಸುವ ಬಗ್ಗೆ

395. ಶ್ರೀ ಜಿ.ಎಸ್. ಆಚಾರ್ (ಬೈಂದೂರು):– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?